ನಡೆಸಿದವು. ಪ್ರಣಯ ಕಲಹವೊ, ಆಹಾರ ಹುಡುಕಿ ಎಲ್ಲಿಗೆ ಹೋಗಬೇಕೆಂದೊ? ಗಂಗಾತರಂಗದ ಶೃತಿಯಲ್ಲಿ ಅವುಗಳ ಇಂಪಾದ ಹಾಡಿಕೆ ಕೇಳಿಸಿತು. ಕವಿಗಳು ಏನೇ ಬರೆದುಕೊಂಡಿರಲಿ, 'ಎಲ್ಲ ಕೇಳಲಿ ಎಂದು ನಾನು ಹಾಡುವುದಿಲ್ಲ' ಎಂದು ಹೇಳುವ ನಿಜವಾದ ಹಕ್ಕು ಹಕ್ಕಿಗಳದ್ದೇ.

ಹಿಮಾಲಯದಲ್ಲಿ ನೂರಾರು ಹಾಡು ಹಕ್ಕಿಗಳಿವೆ. ಹೊಳೆಗಳ ಅಬ್ಬರದ ಶೃತಿಯಲ್ಲಿ ಅವುಗಳ ನಾದ ಕೇಳಿಸುತ್ತದೆ. ಆದರೆ ಗಾಯಕರು ಕಾಣುವುದಿಲ್ಲ. ಕೆಳಸ್ತರಕ್ಕೆ ಹೊಳೆಬಯಲಿಗೆ ಬರುತ್ತಿದ್ದಂತೆ ಹೆಚ್ಚಾಗುವ ಹಕ್ಕಿಗಳು, 10 ಸಾವಿರ ಅಡಿ ಮೇಲೆ ಹೋದಂತೆ ಕಡಿಮೆಯಾಗುತ್ತವೆ.

ಹಿಮಾಲಯದ ಹಕ್ಕಿಗಳಲ್ಲೆಲ್ಲ ವಿಶೇಷವಾದುದು ಕಾಗೆ. ಇಲ್ಲಿನ ಕಾಗೆ ಬೂದಿಬಣ್ಣದ್ದು. ನಮ್ಮ ಕಾಗೆಗಳಂತೆ ಕಾಕಾ ಬದಲಿಗೆ, ಗಂಟಲು ಕೆಟ್ಟ ಗಾಯಕರಂತೆ ಕ್ರರ್‌ಕ್ರರ್ ಎನ್ನುತ್ತದೆ. ಹಿಮಾಲಯದಲ್ಲಿ ಕಾಗೆ ಬಹಳ ಜನಪ್ರಿಯ ಪಕ್ಷಿ. ಅಲ್ಲಿ ಕಾಗೆಯ ಮೇಲೆ ಹಾಡುಗಳಿವೆ. ಘಡವಾಲಿ ಶ್ರೇಣಿಯ ಚಾರಣದಲ್ಲಿ ಮಧ್ಯಾಹ್ನ ವಿಶ್ರಾಂತಿ ಪಡೆವಾಗ ಅಥವಾ ರಾತ್ರಿ ಕ್ಯಾಂಪುಗಳಲ್ಲಿ, ಪೋರ್ಟರುಗಳಾಗಿ ಬರುತ್ತಿದ್ದ ಸ್ಥಳೀಯರಿಗೆ ಹಾಡಲು ನಾವು ವಿನಂತಿಸುತ್ತಿದ್ದೆವು. ಅವರ ಬಹುತೇಕ ಹಾಡುಗಳಲ್ಲಿ ಕಾಗೆ ಪಾತ್ರವಾಗಿ ಬರುತ್ತಿತ್ತು. ಅವುಗಳಲ್ಲಿ ಹಾಡುಗಳ ನಾಯಕ ತಾಯಿಗೊ ತಂದೆಗೊ ಕಳಿಸುತ್ತಿರುವ ಸಂದೇಶ ಇರುತ್ತಿತ್ತು. ಸಂದೇಶ ಕಳಿಸುತ್ತಿರುವ ವ್ಯಕ್ತಿ ಮನೆಯಿಂದ ದೂರ ಬಂದಿರುವ ಕುರಿಗಾಹಿ ಇಲ್ಲವೇ ಸೈನಿಕ. ಒಂದು ಹಾಡು ಹೀಗಿದೆ:

ಉಡುಜ ಕಾಂಗಾ ಬಾದಲ ಬೀಚ್ವೊ ಊಂಚೆ ಹಿಮಾಲಯ್‌ಮಾ
ಮೈರೂರೆ ಬಾರಾ ಲೇಜಾರೆ ಕಾಂಗಾ ಮೇರೆ ಮಾಜಿಮಾ
ಪಾಪಾಜಿ ಮೋರೊ ಫೌಜಿಮಾ ಹಾಲೊ ಘೂಮಿದೊ ಜಾಜಿಮಾ
ಮೈರೂರೆ ಬಾರಾ ಲೇಜಾಯೆ ಕಾಂಗಾ ಮೇರೆ ಮಾಜಿಮಾ

'ಕಾಗೆಯೇ ಹಾರು, ಎತ್ತರದಲ್ಲಿರುವ ಮೋಡಗಳ ನಡುವೆ; ನನ್ನ ತಾಯಿಯ ತನಕ ಒಯ್ಯು ಸಂದೇಶವನ್ನು; ನನ್ನಪ್ಪ ಸೇನೆಯಲ್ಲಿದ್ದಾನೆ. ನನ್ನ ಸಂದೇಶವನ್ನು ನನ್ನ ತಾಯಿಗೆ ಒಯ್ದು ಮುಟ್ಟಿಸು' ಇದು ಇದರ ಸಾರಾಂಶ. ಘಡವಾಲಿ ಪರ್ವತ ಪ್ರಾಂತ್ಯದಲ್ಲಿ ಜನಪ್ರಿಯವಾಗಿರುವ ಇಂತಹ ಹಾಡುಗಳನ್ನು ಪಶುಗಾಹಿಗಳು ಹಾಡುತ್ತಿದ್ದರು. ಮತ್ತೊಂದು ಹಾಡಿನಲ್ಲಿ ಅಜ್ಜಿಗೆ ಮೊಮ್ಮಗ ಸಂದೇಶ ರವಾನಿಸುವ ಸನ್ನಿವೇಶವಿದೆ. ಸೈನಿಕನಾಗಿ ವಿಮಾನದಲ್ಲಿ ಹಾರಾಡುತ್ತಿರುವ ತಂದೆಗೆ, ಮಗ ಸಂದೇಶ ಕಳಿಸುವ ಹಾಡುಗಳೇ ಹೆಚ್ಚಿವೆ. ನೆಲದ ಮೇಲಿರುವ ಮಗ ಆಗಸದಲ್ಲಿರುವ ತಂದೆಗೆ ಹಕ್ಕಿಯ ಮೂಲಕ ಸಂದೇಶ ಕಳಿಸುವುದು ವಿಶೇಷ. ಕಾಕಸಂದೇಶದ ಈ ಹಾಡುಗಳನ್ನು





ಲಡಾಕಿನ ನರ್ತಕಿಯರು

ಘಡವಾಲಿಗಳಲ್ಲದವರು ಉಲಿಯುವುದು ಕಷ್ಟ. ಭಾರತದಲ್ಲಿ ಪಾರಿವಾಳ, ಹಂಸ, ಮೇಘ ಗಿಳಿಗಳ ಮೂಲಕ ಸಂದೇಶ ಕಳಿಸುವ ಕಾವ್ಯಗಳಿವೆ. ಆದರೆ ಕಾಗೆಯ ಮುಖೇನ ಸಂದೇಶ ಕಳಿಸುವ ಕಲ್ಪನೆ ವಿಶಿಷ್ಟ. ಹಿಮಾಲಯದಲ್ಲಿ ಕತ್ತೆಯಂತೆ ಕಾಗೆಯೂ ಕೀಳಿಂಗೆ ಒಳಗಾಗಿಲ್ಲ.

ಯುದ್ಧ ವ್ಯಾಪಾರ ಪಶುಪಾಲನೆ ಇರುವಲ್ಲಿ, ವ್ಯಕ್ತಿಗಳು ಕುಟುಂಬದಿಂದ ಅಗಲಿ ಬಹುದೂರ ಬಹುಕಾಲ ಹೋಗಬೇಕಾಗುತ್ತದೆ. ಈ ಅಗಲಿಕೆಯೇ ಕೂಡುವ ವಿರಹಗೀತೆಗಳನ್ನು ಹುಟ್ಟಿಸುತ್ತದೆ. ವ್ಯಾಪಾರಿ ಸಂಸ್ಕೃತಿಯ ರಾಜಸ್ಥಾನದ ಮರುಭೂಮಿ ಇಂತಹ ವಿರಹಗೀತೆಗಳ ಕಣಜ. 'ಕೇಸರಿಯಾ ಬಾಲಂ ಆವೋ ಮ್ಹಾರೆ ದೇಶ್' (ಕೇಸರಿ ಬಣ್ಣದ ಪ್ರಿಯತಮನೇ ಬಾ ನಮ್ಮ ನಾಡಿಗೆ) ಹಾಡಿನ ಆರ್ತತೆ ಹೃದಯ ಹಿಂಡುವಂತಿದೆ. ಯುಮುನಾ ಕಣಿವೆಯ ಹಿಮಾಲಯದ ಚಾರಣದಲ್ಲಿ ನಾವು ಕೇಳಿದ ಇನ್ನೊಂದು ಹಾಡು ಚಳಿಯನ್ನು ಕುರಿತದ್ದು:

ಠಂಡೋರೆ ಠಂಡೋ ಮೇರ ಪಹಾಡಕಿ ಹವಾ
ಠಂಡೊ ಪಾಣಿ ಠಂಡೋ
ಹೋ ಹೊಹೋ ಹೋಹೋ ಹೋಹೋ,
ಹಾ ಹಹಾ ಹಹಾ ಹಹಾ
ಈಂಚೆಊಚೆ ಹಿಮಾಲಯ ಠಂಡೊ ಠಂಡೋ,
ನೀಸಾ ಗಂಗಾ ಜೇಕ ಚಾಲಾ ಠಂಡೊ ಠಂಡೋ,
ಹೋ ಹೊಹೋ ಹೊಹೋ ಹೊಹೋ,
ಹಾ ಹಹಾ ಹಹಾ ಹಹಾ

ಈ ಹಾಡಿನಲ್ಲಿ ಅರ್ಥವಿಲ್ಲದ ಭಾವಭರಿತ ಶಬ್ದಗಳೇ ಹೆಚ್ಚಾಗಿವೆ. ಹಿಮಾಲಯದ ಏಕಾಂತ, ಚಳಿ, ಪಶುಪಾಲನೆ ಹೊಲಗೆಲಸಗಳಿಗೂ ಹಾಡಿನ ಆಶಯ ಮತ್ತು ರಾಗಗಳಿಗೂ ಯಾವ ಪರಿಯ ಸಂಬಂಧ ಇದ್ದಂತಿದೆ. ವ್ಯಕ್ತಿಗಳು ಹಾಡಿದರೂ ಸಮುದಾಯದ ಅಂತರಂಗವನ್ನು ಕನ್ನಡಿಸುವ ಈ ಹಾಡುಗಳು, ಜನರ ಕನಸು ಆಶೋತ್ತರದ ಪ್ರತಿಬಿಂಬಗಳಾಗಿವೆ. ನಮ್ಮ ಗೈಡ್ ಭರೂಟ ಸೊಗಸಾದ ಗಾಯಕ. ನಮ್ಮ ತಂಡದ ಅನೇಕರು ಅವನ ಶಿಷ್ಯರಾಗಿ ಹಾಡುಗಳನ್ನು ಕಲಿತರು. ಉತ್ತರಕಾಶಿಯ ಚಾರಣದ ಮಾರ್ಗದರ್ಶಿನಿ ಪ್ರಿಯಾಂಕ ಕೂಡ ಒಳ್ಳೆಯ ಗಾಯಕಿ. ಸುಂದರಿಯಾಗಿದ್ದ ಆಕೆಯ ಕೃಪಾಕಟಾಕ್ಷಕ್ಕಾಗಿ ಅನೇಕ ಚಾರಣಿಗರು ಹಂಬಲಿಸುತ್ತಿದ್ದರು. ತಂಡದಲ್ಲಿದ್ದ ಒಬ್ಬ ತರುಣನು ಆಕೆಯನ್ನು ಎಷ್ಟು ಹಚ್ಚಿಕೊಂಡನೆಂದರೆ, ಚಾರಣ ಮುಗಿದ ಬಳಿಕ ಆತನನ್ನು ಹರಸಾಹಸ ಮಾಡಿ ಅವನ ಗೆಳೆಯರು ವಾಪಸು ಎಳೆದುಕೊಂಡು ಬರಬೇಕಾಯಿತು. ಅವನು ಮರಳಿ ಹಿಮಾಲಯಕ್ಕೆ ಹೋಗಿದ್ದರೆ ಆಶ್ಚರ್ಯವಿಲ್ಲ. ಹಿಮಾಲಯದ ಕುರಿಗಾಹಿಗಳು ಕೂಡ ಒಳ್ಳೆಯ ವೇಣುವಾದಕರು. ಗ್ರಾಮಗಳ ಹೊರಗೆ ನಾವು ಮಧ್ಯಾಹ್ನದೂಟ ಮಾಡಿ ವಿಶ್ರಾಂತಿ ತೆಗೆದುಕೊಳ್ಳುವಲ್ಲಿಗೆ ಬಂದು, ಸ್ಥಳೀಯ ಕಲಾವಿದರು ಕೊಳಲನ್ನು ನುಡಿಸಿ ಸಂಭಾವನೆ ಪಡೆಯುತ್ತಿದ್ದರು.

ಹಿಮಾಚಲ ಪ್ರದೇಶ ಮತ್ತು ಉತ್ತರಾಖಂಡಗಳಲ್ಲಿ ಡೊಗ್ರಾ ಪಹಾಡಿ ಹಾಡುಗಳು ಖ್ಯಾತವಾಗಿವೆ.



ಭೂತಾನಿನ ಬಿಲ್ಲುವಿದ್ಯಾ ಗಾಯಕರು